ಅಸಲು ದಾವಾ ಸಂಖ್ಯೆ:**141/2022**
ಡಿ.ಡಬ್ಲ್ಯೂ **:- 1-**ಪರಸುನಾಥಶೆಟ್ಟಿ

ದಿನಾಂಕ: **14-08-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ**:-** ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್ ಎನ್ ಪಿ ವಕೀಲರಿಂದ**:-**

ನಾನು ಈ ಪ್ರಕರಣದಲ್ಲಿ ಪ್ರತಿವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದಾಗಿದೆ.

ಎಂ ಆರ್ ನಂ.ಹೆಚ್ 03/2022-23 ನೇದನ್ನು ನಿಡಿ-1 ಎಂದು, ಕಮ್ಮಾರಗಟ್ಟೆ ಗ್ರಾಮದ ಸರ್ವೇ ನಂ.26/4 ನೇದರ ಸನ್ 2022-23 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿಡಿ-2 ಎಂದು, ದಾವಾ ಆಸ್ತಿಯ ವಾಸ್ತವ ಸ್ಥಿತಿಗತಿ ತೋರಿಸುವ ಕುರಿತು 9 ಪೋಟೋಗಳನ್ನು ಹಾಜರುಪಡಿಸಿದ್ದು ಅವುಗಳ ನೈಜತೆಯ ಕುರಿತು ಕಲಂ.65 ಬಿ ನೇದರ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಹ ಸಲ್ಲಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-3 ರಿಂದ 11 ಎಂದು, ದಿ: 07-07-2022 ರಂದು ಪ್ರತಿವಾದಿಯು ಹೊನ್ನಾಳಿ ಪೊಲೀಸ್ ವೃತ್ತ ನಿರೀಕ್ಷಕರಿಗೆ ನೀಡಿದ ಒಂದು ದೂರಿನ ಪ್ರತಿಯನ್ನು ನಿಡಿ-12 ಎಂದು, ಆ ದೂರಿನ ಕುರಿತು ನೀಡಿದ ಹಿಂಬರಹವನ್ನು ನಿಡಿ-13 ಎಂದು, ಅದೇ ರೀತಿ ದಿ: 22-07-2022 ರಂದು ಹೊನ್ನಾಳಿ ಪೊಲೀಸರು ನೀಡಿದ ಇನ್ನೊಂದು ಹಿಂಬರಹವನ್ನು ನಿಡಿ-14 ಎಂದು, ದಾವಾ ಆಸ್ತಿಯ ಕುರಿತಾದ 7 ಪೋಟೋಗಳನ್ನು ನಿಡಿ-15 ರಿಂದ 21 ಎಂದು, ಕಲಂ.65 ಬಿ ನೇದರಡಿಯಲ್ಲಿನ ಪ್ರಮಾಣ ಪತ್ರವನ್ನು ನಿಡಿ-22 ಎಂದು, ಸರ್ವೇ ನಂ.26/4 ನೇದರ ಸನ್ 2026-27 ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿಡಿ-23 ಎಂದು ಗುರುತಿಸಲಾಯಿತು.

ವಾದಿಯ ಪರ ವಕೀಲರಾದ ಶ್ರೀ.ಕೆ ಜಿ ಎಂ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.